ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 22.04.2024.

**ಮುಂದುವರೆದ ಪಾಟೀ ಸವಾಲು:** 13 ನೇ ಪ್ರತಿವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದ:

ಇವತ್ತಿನವರೆಗೂ 13 ನೇ ಪ್ರತಿವಾದಿಯ ಎಸ್‌ಬಿ ಅಕೌಂಟ್ ಹೊಲ್ಡದಲ್ಲಿ ಇರುತ್ತದೆ. ಸದರಿ ಅಕೌಂಟ್ ಹೊಲ್ಡನಲ್ಲಿ ಇರುವುದು ಈ ದಾವೆ ಕಾರಣದಿಂದಲೇ ಇರುತ್ತದೆ. 13 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ದಾವೆಗೆ ಸಂಬಂಧಪಟ್ಟಂತೆ ಏನು ದಾಖಲೆಗಳನ್ನು ಹಾಕಿರುತ್ತಾನೆ ಎಂದು ನಾನು ಪರಿಶೀಲನೆ ಮಾಡಿಲ್ಲ, ಏಕೆಂದರೆ ಅವು ಆತನ ವೈಯಕ್ತಿಕವಾಗಿರುತ್ತವೆ. ನನ್ನ ಪ್ರತಿವಾದ ಪತ್ರದ ಖಂಡಿಕೆ 3 ರಲ್ಲಿ 6 ರಿಂದ 13 ನೇ ಪ್ರತಿವಾದಿಯರು ಜಂಟಿ ಮತ್ತು ವೈಯಕ್ತಿಕವಾಗಿ ಹೊಣೆಗಾರರು ಇರುತ್ತಾರೆ ಎಂದು ಹೇಳಿದ್ದು, ಆದರೆ 13 ನೇ ಪ್ರತಿವಾದಿ ಹೇಗೆ ಜವಾಬ್ದಾರನು ಇರುತ್ತಾನೆ ಎಂದು ಸಮರ್ಥಿಸಲು ಯಾವುದೇ ಸಮಂಜವಾದ ದಾಖಲೆಗಳು ಮತ್ತು ಆಧಾರಗಳು ಇಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಗಂಡ ವೆಂಕಟರಾಮ ಬಾಬು ಮತ್ತು 13 ನೇ ಪ್ರತಿವಾದಿ ಮಧ್ಯ ಇರುವ ಕೆಳವೊಂದು ವ್ಯವಹಾರಗಳನ್ನು ಹೊರತುಪಡಿಸಿ, ಉಳಿದ ಆರೋಪಿಸಿರುವ ವ್ಯವಹಾರಗಳು 13 ನೇ ಪ್ರತಿವಾದಿಯ ಗಮನದಲ್ಲಿ ಇಲ್ಲದೇ ಇರುವ ವ್ಯವಹಾರಗಳು ಆಗಿರುತ್ತವೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಹೇಳಿರುವಂತೆ ಸಿಬಿಐ ತನಿಖೆ ಮಾಡಿರುವ ಬಗ್ಗೆ ಹಾಗೂ ಅವರು ಅಂತಿಮ ವರದಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸಿಬಿಐ ತನಿಖೆ ಪೂರ್ಣಗೊಂಡಿದ್ದರ ಬಗ್ಗೆ ಯಾವುದೇ ದಾಖಲೆಗಳು ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸರಿ. ಸಿಬಿಐ ಇಲಾಖೆಯವರು ಯಾವುದೇ ತನಿಖೆಮಾಡಿರುವುದಿಲ್ಲ, ಆ ಕಾರಣದಿಂದಲೇ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಗಂಡನ ತಪ್ಪಿನಿಂದ ಆದ ಹಾನಿಯನ್ನು ತುಂಬಿಸಿಕೊಳ್ಳುವ ಸಲುವಾಗಿ ವಿನಾಕಾರಣ 13 ನೇ ಪ್ರತಿವಾದಿ ಮೇಲೆ ಹೊಣೆಗಾರಿಕೆ ಹೊರಿಸಿ, ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿ, ಆತನ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ 13 ನೇ ಪ್ರತಿವಾದಿಯ ಎಸ್‌ಬಿ ಅಕೌಂಟ್‌ನ ಹಣವನ್ನು ವಿನಾಕಾರಣ ಹೋಲ್ಡ್ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

**ಪಾಟೀ ಸವಾಲು:** 2, 3, 6, 7 ಮತ್ತು 8 ನೇ ಪ್ರತಿವಾದಿಗಳ ಪರ ವಕೀಲರಿಂದ:

(ಈ ಹಂತದಲ್ಲಿ 2, 3, 6, 7 ಮತ್ತು 8 ನೇ ಪ್ರತಿವಾದಿಗಳ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**